# ಎಲ್ಲರೂ ನೋಡುವ ಒಳ್ಳೆಯ ಸಿನಿಮಾ ಮಾಡ್ಬೇಕು!





ತಾನು ಆಯ್ದುಕೊಳ್ಳುವ ದಾರಿ ಭಿನ್ನವಾಗಿದ್ದರಷ್ಟೇ ಸಾಲದು, ಮೌಲ್ಯಯುತವಾಗಿಯೂ ಇರಬೇಕು ಎನ್ನುವ ಹಂಬಲದ ಯುವ ನಿರ್ದೇಶಕ ಸುಧೀರ್ ಶಾನಭಾಗ.

■ ಪದ್ಮನಾಭ ಭಟ್

‘ಅನಂತು ವರ್ಸಸ್ ನುಸ್ರತ್’ – ಈ ಸಿನಿಮಾ ಹೆಸರು ಕೇಳಿದರೆ ಕೆಲವರ ಕಣ್ಣುಗಳಾದರೂ ಅರಳುತ್ತವೆ. ‘ತುಂಬಾ ಒಳ್ಳೆಯ ಸಿನಿಮಾ. ಆದ್ರೆ ಓಡ್ಲಿಲ್ಲ’ ಎನ್ನುವುದರೊಟ್ಟಿಗೇ ಮಾತು ಆರಂಭವಾಗುತ್ತದೆ. ಕಮರ್ಷಿಯಲ್ ಸೋಲು ಗೆಲುವುಗಳಿಗೂ ಸಿನಿಮಾದ ಗುಣಮಟ್ಟಕ್ಕೂ ತುಂಬ ಸಲ ತಾಳಮೇಳವೇ ಇರುವುದಿಲ್ಲ. ‘ಅನಂತು...’ ಸಿನಿಮಾ ನೋಡಿದವರೆಲ್ಲರ ಬಾಯಲ್ಲಿಯೂ ಬರುವ ಮಾತು ‘ಈ ಸಿನಿಮಾ ಗೆಲ್ಲಬೇಕಿತ್ತು’ ಎಂಬುದೇ. ಹಾಗಾಗಿ ಒಂದು ರೀತಿಯಲ್ಲಿ ಆ ಸಿನಿಮಾ ಗೆದ್ದಿದೆ ಎಂದೇ ಹೇಳಬಹುದು.

‘ಅನಂತು’ ಸಿನಿಮಾದ ಬಗ್ಗೆ ಇಷ್ಟೆಲ್ಲ ಮಾತಾಡಲು ಕಾರಣವಿದೆ. ಆ ಕಾರಣದ ಹೆಸರು ಸುಧೀರ್ ಶಾನಭಾಗ. ‘ಅನಂತು‘ ಸಿನಿಮಾಗೆ ಆಕ್ಷನ್ ಕಟ್ ಹೇಳಿದ ಸುಧೀರ್, ಮಹತ್ವಾಕಾಂಕ್ಷೆಯ ಯುವ ನಿರ್ದೇಶಕ. ನಾನು ಐದು ಸಿನಿಮಾ ಮಾಡಿದರೆ ಎಲ್ಲವೂ ಒಂದಕ್ಕಿಂತ ಒಂದು ಭಿನ್ನವಾಗಿರಬೇಕು; ಅಷ್ಟೇ ಒಳ್ಳೆಯ ಸಿನಿಮಾ ಕೂಡ ಆಗಬೇಕು’ ಎಂಬುದು ಅವರ ಛಲ.

ಸುಧೀರ್ ಹುಟ್ಟಿದ್ದು ಮಣಿಪಾಲದಲ್ಲಿ. ಬೆಳೆದಿದ್ದೆಲ್ಲ ಶೃಂಗೇರಿಯ ಕೊಪ್ಪದಲ್ಲಿ. ಬಿ.ಎಸ್ಸಿ. ಓದಿದ ಅವರ ಕಣ್ಣುಗಳ ಮೂಲಕ ಮನಸ್ಸಿಗೆ ಇಳಿದಿದ್ದೆಲ್ಲ ಸಿನಿಮಾ ಪಥ್ಯವೇ. ನಂತರ ಬೆಂಗಳೂರಿಗೆ ಬಂದ ಅವರು ‘ರಾಧಾ ಕಲ್ಯಾಣ’, ‘ಬದುಕು ಜಟಕಾ ಬಂಡಿ’ ಸೇರಿದಂತೆ ಹಲವು ಧಾರಾವಾಹಿ ಮತ್ತು ರಿಯಾಲಿಟಿ ಶೋಗಳಿಗೆ ಕೆಲಸ ಮಾಡಿದರು. ರಾಷ್ಟ್ರಪ್ರಶಸ್ತಿ ಪಡೆದ ತುಳು ಸಿನಿಮಾ ‘ಮುದಿಪು’ವಿಗೂ ಸುಧೀರ್ ಅವರದ್ದೇ ಚಿತ್ರಕಥೆ. ‘ವಿನಯ್ ರಾಜ್‌ಕುಮಾರ್ ಅವರ ಜೊತೆ ಅನಂತು ವರ್ಸಸ್ ನುಸ್ರತ್’ ಸಿನಿಮಾ ಮಾಡಲು ಅವಕಾಶ ಸಿಕ್ಕಿದ್ದು ನನಗೆ ದೊಡ್ಡ ಅನುಭವ ನೀಡಿತು’ ಎಂದು ಅವರು ನೆನಪಿಸಿಕೊಳ್ಳುತ್ತಾರೆ. ಅರವಿಂದ್ ಶಾಸ್ತ್ರಿ ನಿರ್ದೇಶನದ ‘ಅಳಿದುಳಿದವರು’ ಕಥೆ, ಚಿತ್ರಕಥೆ ಬರೆದಿದ್ದು ಸುಧೀರ್ ಅವರೇ. ಈಗ ತಮ್ಮ ಸ್ವತಂತ್ರ ನಿರ್ದೇಶನದ ಎರಡನೇ ಸಿನಿಮಾದ ಕೆಲಸದಲ್ಲಿ ಅವರು ಮುಳುಗಿದ್ದಾರೆ.

ಮೊದಲ ಸಿನಿಮಾದಲ್ಲಿ ಎರಡು ಧರ್ಮಗಳ ನಡುವಿನ ಸಾಮರಸ್ಯವನ್ನು ಬಿಂಬಿಸುವ ಕಥೆಯನ್ನು ಹೇಳಿದ್ದ ಸುಧೀರ್ ಈಗ ಎರಡು ಐಡಿಯಾಲಜಿಗಳ ನಡುವಿನ ತಿಕ್ಕಾಟದ ಕಥೆಯನ್ನು ಹೇಳಲು ಹೊರಟಿದ್ದಾರೆ.

‘ಎಡ ಬಲಗಳ ನಡುವೆ ಸಿಕ್ಕಿಕೊಂಡು ನಾವೆಲ್ಲರೂ ಒದ್ದಾಡುತ್ತಿದ್ದೇವೆ. ನಾವೇನೋ ಘನವಾದದ್ದನ್ನು ಮಾಡುತ್ತಿದ್ದೇವೆ ಎಂಬ ಭ್ರಮೆಯಲ್ಲಿ ನಾವಿದ್ದೇವೆ. ಆದರೆ ನಮ್ಮನ್ನು ಒಂದು ಸಾಧನವಾಗಿ ಬಳಸಿಕೊಂಡು ಇನ್ಯಾರೋ ಲಾಭ ಪಡೆದುಕೊಳ್ಳುತ್ತಿದ್ದಾರೆ. ನಾವು ಅವರ ಕೈಲಿನ ಹತಾರವಾಗಿ ಬಳಕೆಯಾಗುತ್ತಿದ್ದೇವೆ. ಇದನ್ನೇ ಇಟ್ಟುಕೊಂಡು ಒಂದು ಕಥೆ ಹೆಣೆದು ಸಿನಿಮಾ ಮಾಡುತ್ತಿದ್ದೇವೆ. ಈಗಾಗಲೇ ಚಿತ್ರೀಕರಣ ಮುಗಿದಿದೆ. ಆದರೆ ಶೀರ್ಷಿಕೆ ಇನ್ನೂ ಅಂತಿಮಗೊಂಡಿಲ್ಲ’ ಎಂದು ವಿವರಿಸುತ್ತಾರೆ ಸುಧೀರ್.

‘ಸುಧಾ’ ವಾರಪತ್ರಿಕೆಯಲ್ಲಿ ಪ್ರಕಟವಾಗಿರುವ ‘ಒಂದು ಬಹುಮಾನಿತ ಕಥೆಯ ಸುತ್ತ’ ಎಂಬ ನಟರಾಜ್ ಹುಳಿಯಾರ್ ಅವರ ಕಥೆಯನ್ನು ಇಟ್ಟುಕೊಂಡು ಗೌತಮ್ ಜೋತ್ಸ್ನಾ ಚಿತ್ರಕಥೆ ಮತ್ತು ಸಂಭಾಷಣೆ ಬರೆದಿದ್ದಾರೆ. ನಟರಾಜ್ ಎಸ್. ಭಟ್, ಕೃತಿಕಾ ರವೀಂದ್ರ, ಸಂಪತ್ ಮುಂತಾದವರು ಮುಖ್ಯಭೂಮಿಕೆಯಲ್ಲಿ ನಟಿಸಿದ್ದಾರೆ. ಸದ್ಯದಲ್ಲಿಯೇ ಚಿತ್ರದ ಬಗ್ಗೆ ಸಂಪೂರ್ಣ ಮಾಹಿತಿ ಕೊಡುವ ಸೂಚನೆಯನ್ನೂ ಸುಧೀರ್ ನೀಡುತ್ತಾರೆ.

‘ಫಿಲ್ಮ್ ಫೆಸ್ಟಿವಲ್‌ನಲ್ಲಿ ನೂರು ಜನ ನೋಡಿ ಇಷ್ಟಪಡುವ ಸಿನಿಮಾ ಮಾಡುವುದು ನಂಗೆ ಇಷ್ಟವಿಲ್ಲ. ಹಾಗಂತ ಕಮರ್ಷಿಯಲ್ ಆಗಿ ಗೆಲ್ಲುವುದಕ್ಕೆ ಏನು ಬೇಕಾದರೂ ಮಾಡಲೂ ನಾನು ಸಿದ್ಧನಿಲ್ಲ. ಒಳ್ಳೆಯ ಸಿನಿಮಾವನ್ನು ಹೆಚ್ಚಿನ ಜನರಿಗೆ ತಲುಪಿಸುವಂತೆ ಮಾಡಬೇಕು ಎನ್ನುವುದು ನನ್ನ ಉದ್ದೇಶ’ ಎನ್ನುತ್ತಾರೆ ಅವರು.

‘ಒಂದು ಪುಸ್ತಕ ಬರೆದರೆ ಹೆಚ್ಚೆಂದರೆ ಸಾವಿರ ಜನ ಓದಬಹುದು. ಆದರೆ ಒಂದು ಸಿನಿಮಾ ಮೂಲಕ ಅದಕ್ಕಿಂತ ಎಷ್ಟೋ ಪಟ್ಟು ಹೆಚ್ಚು ಜನರಿಗೆ ತಲುಪಬಹುದು. ಕಥೆ ಹೇಳಲು ಸಿನಿಮಾ ಅತ್ಯಂತ ಸೂಕ್ತ ಮಾಧ್ಯಮ. ಹಾಗಂತ ಕಥೆ ಹೇಳುವುದಷ್ಟೇ ನನ್ನ ಉದ್ದೇಶವಲ್ಲ. ಆ ಕಥೆಯ ಮೂಲಕ ಸಮಕಾಲೀನ ಸಾಮಾಜಿಕ ವಿದ್ಯಮಾನಗಳಿಗೆ ಸ್ಪಂದಿಸುವ ಕೆಲಸವನ್ನೂ ಮಾಡಬೇಕು ಎಂಬುದು ನನ್ನ ನಿಲುವು ಈ ಸಿನಿಮಾದಲ್ಲಿ ನಾನು ಮಾಡುತ್ತಿರುವುದೂ ಅದನ್ನೇ’ ಎಂದು ಅವರು ವಿವರಿಸುತ್ತಾರೆ.

ಒಂದಕ್ಕಿಂತ ಇನ್ನೊಂದು ಸಿನಿಮಾ ಭಿನ್ನವಾಗಿರಬೇಕು ಎಂಬ ತಮ್ಮ ಹಟಕ್ಕೆ ಅನುಗುಣವಾಗಿ ಸುಧೀರ್ ತಮ್ಮ ಮುಂದಿನ ಸಿನಿಮಾಕ್ಕಾಗಿ ಔಟ್ ಆ್ಯಂಡ್ ಔಟ್ ಕಾಮಿಡಿ ವಸ್ತುವನ್ನು ಆಯ್ದುಕೊಂಡಿದ್ದಾರಂತೆ.

‘ಯಾವುದೇ ಜಾನರ್ ಸಿನಿಮಾ ಮಾಡಿದರೂ ನನ್ನ ಸಂವೇದನಾಶೀಲತೆಯನ್ನು ಮರೆಯುವುದಿಲ್ಲ’ ಎಂದು ದೃಢವಾಗಿ ಹೇಳುವ ಸುಧೀರ್ ಅವರಿಂದ ಕನ್ನಡದಲ್ಲಿ ಇನ್ನಷ್ಟು ಒಳ್ಳೆಯ ಸಿನಿಮಾಗಳನ್ನು ಖಂಡಿತ ನಿರೀಕ್ಷಿಸಬಹುದು. ■